## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 37(107)

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 12-09-2022

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯದಲ್ಲಿ ಪ್ರತಿ ವೃಂದವಾರು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಕರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಪ್ರಾಥಮಿಕ ಶಾಲಾ ವಿಭಾಗ |

| ಕ್ರ. ಸಂ | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ | ಮಂಜೂರಾದ ಶಿಕ್ಷಕರ ಸಂಖ್ಯೆ |
|---|---|---|
| 1 | ಹಿರಿಯ ಮುಖ್ಯ ಶಿಕ್ಷಕರು | **3396** |
| 2 | ಮುಖ್ಯ ಶಿಕ್ಷಕರು | **13096** |
| 3 | ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5ನೇ ತರಗತಿ) | **112467** |
| 4 | ಪದವೀಧರ ಪ್ರಾಥಮಿಕಶಾಲಾ ಶಿಕ್ಷಕರು(ಜಿ.ಪಿ.ಟಿ)(6ರಿಂದ 8ನೇ ತರಗತಿ) | **51781** |
| 5 | ದೈಹಿಕ ಶಿಕ್ಷಣ ಶಿಕ್ಷಕರು ಹಿರಿಯ ಶ್ರೇಣಿ-11 ಮತ್ತು ದರ್ಜೆ-11 | **6772** |
| 6 | ಸಂಗೀತ ಶಿಕ್ಷಕರು | **259** |
| 7 | ಚಿತ್ರಕಲಾ ಶಿಕ್ಷಕರು | **222** |
| 8 | ನರ್ಸರಿ ಶಾಲಾ ಶಿಕ್ಷಕರು (ಎನ್.ಎಸ್.ಟಿ-ಶಾಲಾಮಾತೆ) | **539** |
| | ಒಟ್ಟು | **188532** |

<table>
<tr><td></td><td></td><td>
ಪ್ರೌಢಶಾಲಾ ವಿಭಾಗ
<table>
<tr><th>ಕ್ರ ಸಂ.</th><th>ಪ್ರೌಢಶಾಲಾ ಶಿಕ್ಷಕರ ವೃಂದ</th><th>ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ</th></tr>
<tr><td>1.</td><td>ಸಹ ಶಿಕ್ಷಕರು</td><td>36615</td></tr>
<tr><td>2.</td><td>ದೈಹಿಕ ಶಿಕ್ಷಕರು</td><td>5187</td></tr>
<tr><td>3.</td><td>ವಿಶೇಷ ಶಿಕ್ಷಕರು</td><td>1551</td></tr>
<tr><td></td><td>ಒಟ್ಟು</td><td>43353</td></tr>
</table>
</td></tr>
<tr><td>ಆ.</td><td>ಈ ಶಿಕ್ಷಕರ ವರ್ಗಾವಣೆಗಳು ಕಾಲ ಕಾಲಕ್ಕೆ ನಡೆಯುತ್ತಿವೆಯೆ;</td><td>ನಡೆಯುತ್ತಿರುತ್ತವೆ.</td></tr>
<tr><td>ಇ.</td><td>ಈ ಶಿಕ್ಷಕರು ಅವರ ಇಚ್ಛೆಪಡುವ ಸ್ಥಳಕ್ಕೆ ಒಂದು ಬಾರಿ ವರ್ಗಾವಣೆ ಮಾಡಲು ಕೋರಿಕೆ ಇಟ್ಟಿದ್ದಾರೆಯೇ; (ಒನ್ ಟೈಮ್ ಸೆಟ್ಲಮೆಂಟ್) ಆ ರೀತಿ ವರ್ಗಾವಣೆ ಕೈಗೊಂಡಲ್ಲಿ ಶೈಕ್ಷಣಿಕವಾಗಿ ಹಿಂದುಳಿದ/ಪ್ರಾದೇಶಿಕವಾಗಿ ಹಿಂದುಳಿದ ಹಾಗೂ ಶೇ. 25% ಕ್ಕೂ ಹೆಚ್ಚು ಶಿಕ್ಷಕರ ಹುದ್ದೆ ಖಾಲಿಯಿರುವ ಬ್ಲಾಕ್‌ಗಳಲ್ಲಿ ಬೀರಬಹುದಾದ ಪರಿಣಾಮದ ಕುರಿತು ಸರ್ಕಾರ/ಸರ್ಕಾರದ ಯಾವುದಾದರೂ ಸಂಸ್ಥೆ ಅಧ್ಯಯನ ನಡೆಸಿದಿಯೇ ? (ಅದರ ವಿವರಣೆ ನೀಡುವುದು)</td><td>
ಈ ಶಿಕ್ಷಕರು ಅವರು ಇಚ್ಛೆಪಡುವ ಸ್ಥಳಕ್ಕೆ ಅಥವಾ ಅವರ ಸ್ವಂತ ಜಿಲ್ಲೆಗೆ ಒಂದು ಬಾರಿ (ಒನ್‌ಟೈಮ್ ಸೆಟ್ಲಮೆಂಟ್) ವರ್ಗಾವಣೆ ಮಾಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.
ಶಿಕ್ಷಕರ ವರ್ಗಾವಣಾ ಕಾಯ್ದೆ/ನಿಯಮಗಳಡಿಯಲ್ಲಿ ಕೋರಿಕೆ ವರ್ಗಾವಣೆಗೆ ಶೇಕಡಾವಾರು ಮಿತಿಯನ್ನು ನಿಗಧಿಪಡಿಸಿರುವುದರಿಂದ ಕಾಯ್ದೆ/ನಿಯಮಗಳನ್ನು ಮೀರಿ ಶಿಕ್ಷಕರ ಮನವಿಯಂತೆ ಒಂದು ಬಾರಿ (ಒನ್‌ಟೈಮ್ ಸೆಟ್ಲಮೆಂಟ್) ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅರ್ಹತೆ ಇದ್ದಲ್ಲಿ ಖಾಲಿ ಹುದ್ದೆಗಳ ಲಭ್ಯತೆಗಳಿಗೊಳಪಟ್ಟು ಅವರು ಇಚ್ಛೆ ಪಡುವ ಸ್ಥಳ/ಜಿಲ್ಲೆಗೆ ವರ್ಗಾವಣೆ ಪಡೆಯಲು ಅವಕಾಶವಿದೆ.
ಒಂದು ಬಾರಿ (ಒನ್‌ಟೈಮ್ ಸೆಟ್ಲಮೆಂಟ್) ವರ್ಗಾವಣೆ ಕೈಗೊಳ್ಳಲು ಸರ್ಕಾರ/ ಸರ್ಕಾರದ ಯಾವುದಾದರೂ ಸಂಸ್ಥೆ ಅಧ್ಯಯನ ನಡೆಸಿರುವುದಿಲ್ಲ.
</td></tr>
</table>

**ಸಂಖ್ಯೆ: ಇಪಿ 55 ಪಿಎಂಎ 2022**

(ಬಿ.ಸಿ. ನಾಗೇಶ್)

**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ**

**ಸಕಾಲ ಸಚಿವರು**